<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>

<u>ಆಳಂದ</u>

ಸಿ.ಸಿ, ನಂಬರ 5741/2023 ಸಿ.ಡಬ್ಲೂ 5 ಪಿ.ಡಬ್ಲೂ .03

| | |
|---|---|
| ಹೆಸರು | ಸಚೀನ |
| ತಂದೆ/ಗಂಡ | ವೆಂಕಪ್ಪಾ |
| ವಯಸ್ಸು | 27 ವರ್ಷ |
| ಉದ್ಯೋಗ | ಪೋಲಿಸ್ ಪೇದೆ ಆಳಂದ ಪೋಲಿಸ್ ಠಾಣೆ |
| ವಾಸಸ್ಥಳ | ಅಳಂದ |

ದಿನಾಂಕ 12-12-2025
ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ನಾನು ಜನೇವರಿ 2022 ರಿಂದ ಇಲ್ಲಿಯವರೆಗೆ ಆಳಂದ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 07-06-2023 ರಂದು ನಾನು ಮತ್ತು ಚಾಸ-4 ರವರು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರಿಗೆ ಚಿಂಚೋಳ್ಳಿ (ಬಿ) ಗ್ರಾಮದ ಹರಿಜನ ವಾಡದ ನಿರಗುಡಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯೆ ಮಾರಟ ಮಾಡುತ್ತಿದ್ದಾರೆ ಎಂದು ಖಚಿತ ಬಾತ್ಮಿ ಬಂದಿದ್ದು, ದಾಳಿ ಮಾಡಲು ಹೋಗಬೇಕು ತಿಳಿಸಿದ ಕಾರಣ ನಾನು ಮತ್ತು ಚಾಸ-4 ಪಂಚರಾದ ಚಾಸ-2, 3ರವರು ಸೇರಿಕೊಂಡು ಚಾಸ-1ರವರ ಜೋತೆ ದಾಳಿ ಮಾಡಲು ನಮ್ಮ ಸರ್ಕಾರಿ ವಾಹನ ಸಂಖ್ಯೆ ಕೆ ಎ 32/ಜಿ-697 ರಲ್ಲಿ ಹೋಗಿ ಸ್ವಲ್ಪ ದೂರದಲ್ಲಿ ನಿಲ್ಲಿಸಿ ಸ್ವಲ್ಪ ನಡೆದುಕೊಂಡು ಹೋಗಿರುತ್ತೇವೆ. ನಂತರ ಆರೊಪಿಯ ಮನೆಯ ಮುಂದೆ ಒಂದು ಶೆಡ್ಡು ಹಾಕಿದ್ದು ಅಲ್ಲಿ ಅಕ್ರಮವಾಗಿ ಸರಾಯಿ ಮಾರಟ ಮಾಡುತ್ತಿದ್ದನ್ನು ಖಚಿತಪಡಿಸಿಕೊಂಡು ಪಂಚರ ಸಮಕ್ಷಮ ದಾಳಿ ಮಾಡಿ ನೋಡಿದಾಗ Orginal Choice 90 ML ನ 96 Pouch ಗಳು ಮತ್ತು 240/- ರೂಪಾಯಿ ನಗದು ಹಣ ದೊರೆಯಿತು, ಸದರಿ ಮದ್ಯ ಮತ್ತು ಹಣವನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ಒಂದು ಬಿಳಿ ಚೀಲದಲ್ಲಿ ಹಾಕಿ ಹೊಲೆದು, ಸೀಲ್ ಮಾಡಿ, 6.15 ರಿಂದ 7.15 ರವರೆಗೆ ಪಂಚನಾಮೆಯನ್ನು ಜರುಗಿಸಿ ನಂತರ ಆರೋಪಿ, ವರದಿ, ಪಂಚನಾಮೆ ಮತ್ತು ಮು.ಮಾಲಿನೊಂದಿಗೆ ಠಾಣಾ ಅಧಿಕಾರಿಯ ಮುಂದೆ ಮುಂದಿನ ಕ್ರಮಕ್ಕಾಗಿ ಹಾಜರುಪಡಿಸಿರುತ್ತಾರೆ.

ಸಾಕ್ಷಿಯ ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾ 1 ಮತ್ತು 2ನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರಃ ಎಸ್ ಎಸ್ ಸಿ  ವಕೀಲರಿಂದ:</u>

ಆಳಂದ ಪೋಲಿಸ್ ಠಾಣೆಯಿಂದ ಚಿಂಚೋಳ್ಳಿ (ಬಿ) ಗ್ರಾಮಕ್ಕೆ 15 ಕಿ.ಮೀ ಅಂತರ ಆಗುತ್ತದೆ. ನಾವು ಆಳಂದ ಆರ್ ಟಿ.ಓ ಹಳೆಯ ಚೆಕಪೊಸ್ಟ, ಸವಳೇಶ್ವರ ಪಾಟೀ, ಪಡಸಾವಳಿ ಮಾರ್ಗವಾಗಿ ಚಿಂಚೋಳ್ಳಿ (ಕೆ) ಗ್ರಾಮದಿಂದ ಚಿಂಚೋಳ್ಳಿ (ಬಿ) ಗ್ರಾಮಕ್ಕೆ ಹೋಗಿರುತ್ತೇವೆ. ಪಂಚರನ್ನು ಚಾಸಾ 1 ರವರು ಕರೆಸಿರುತ್ತಾರೆ. ನಾವು ಘಟನಾ ಸ್ಥಳದಿಂದ 100 ರಿಂದ 150 ಮೀ ಅಡಿ ಅಂತರದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿದ್ದೇವು. ನಾವು ಘಟನಾ ಸ್ಥಳಕ್ಕೆ ಹೋದ ವಾಹನದಲ್ಲಿ ಒಟ್ಟು 7 ಜನರು ಹೋಗಬಹುದು. ನಾನು ಮತ್ತು ಚಾಸಾ 1 ರಿಂದ 4 ರವರು ಒಂದೇ ವಾಹನದಲ್ಲಿ ಹೋಗಿರುತ್ತೇವೆ. ರೂ. 240/- ರೂಪಾಯಿ ಮುಖಬೆಲೆ ನನಗೆ ನೆನಪಿಲ್ಲ. ಘಟನಾ ಸ್ಥಳದ ಚಕಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. ಘಟನಾ ಸ್ಥಳದಲ್ಲಿ ಇರುವ ರಸ್ತೆಯ ಮೇಲೆ ಜನರು ತಮ್ಮ ಹೊಲಗಳಿಂದ ಮನೆಗಳಿಗೆ ಹೋಗಿ ಬಂದು ಮಾಡುತ್ತಾರೆ ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ನಿರಗುಡಿಗೆ ಹೋಗುವ ರಸ್ತೆಯ ನೆರವಾಗಿ ಇರುತ್ತದೆ ಯಾವುದೇ ತಿರುವು ಇರುವುದಿಲ್ಲ ಎಂದರೆ ಸರಿ. ದಾಳಿ ಮಾಡಲು ಹೋದಾಗ ಘಟನಾ ಸ್ಥಳದಲ್ಲಿ 3 ಜನರು ಸಾರಾಯಿ ಕುಡಿಯುತ್ತಿದ್ದರು ಮತ್ತು ಆರೋಪಿ ಇದ್ದರು. ಸದರಿ 3 ಜನರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ನಾವು ಆರೋಪಿ ಮಧ್ಯ ಮಾರಾಟ ಮಾಡುತ್ತಿದ್ದ ರಟ್ಟಿನ ಡಬ್ಬಿಯನ್ನು ಜಪ್ತಿ ಪಡಿಸಿಕೊಂಡಿರುತ್ತೇವೆ. ಪಂಚನಾಮೆಯನ್ನು ಸ್ಥಳದಲ್ಲಿಯೇ ಬರೆದಿರುತ್ತಾರೆ. ಪಂಚನಾಮೆಯನ್ನು ನಮ್ಮ ಠಾಣೆಯ ರೈಟರವರು ಬರೆದಿರುತ್ತಾರೆ. ಎಲ್ಲಾರ ಸಹಿ ಪಡೆದು ಠಾಣೆಗೆ ಬಂದಿರುತ್ತೇವೆ ಎಂದರೆ ಸರಿ. ಚಾಸಾ 1 ರವರಿಗೆ ಯಾವುದೇ ಬಾತ್ಮಿ ಬಂದಿರುವುದಿಲ್ಲ, ಮತ್ತು ನಾವು ದಾಳಿ ಮಾಡಲು ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 07-06-2023 ರಂದು ನಾನು ಮತ್ತು ಚಾಸ-4 ರವರು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರಿಗೆ ಚಿಂಚೋಳ್ಳಿ (ಬಿ) ಗ್ರಾಮದ ಹರಿಜನ ವಾಡದ ನಿರಗುಡಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯೆ ಮಾರಟ ಮಾಡುತ್ತಿದ್ದಾರೆ ಎಂದು ಖಚಿತ ಬಾತ್ಮಿ ಬಂದಿದ್ದು, ದಾಳಿ ಮಾಡಲು ಹೋಗಬೇಕು ತಿಳಿಸಿದ ಕಾರಣ ನಾನು ಮತ್ತು ಚಾಸ-4 ಪಂಚರಾದ ಚಾಸ-2, 3ರವರು ಸೇರಿಕೊಂಡು ಚಾಸ-1ರವರ ಜೋತೆ ದಾಳಿ ಮಾಡಲು ನಮ್ಮ ಸರ್ಕಾರಿ ವಾಹನ ಸಂಖ್ಯೆ ಕೆ ಎ 32/ಜಿ-697 ರಲ್ಲಿ ಹೋಗಿ ಸ್ವಲ್ಪ ದೂರದಲ್ಲಿ ನಿಲ್ಲಿಸಿ ಸ್ವಲ್ಪ ನಡೆದುಕೊಂಡು ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೊಪಿಯ ಮನೆಯ ಮುಂದೆ ಒಂದು ಶೆಡ್ಡು ಹಾಕಿದ್ದು ಅಲ್ಲಿ ಅಕ್ರಮವಾಗಿ ಸರಾಯಿ ಮಾರಟ ಮಾಡುತ್ತಿದ್ದನ್ನು ಖಚಿತಪಡಿಸಿಕೊಂಡು ಪಂಚರ ಸಮಕ್ಷಮ ದಾಳಿ ಮಾಡಿ ನೋಡಿದಾಗ Orginal Choice 90 ML ನ 96 Pouch ಗಳು ಮತ್ತು 240/- ರೂಪಾಯಿ ನಗದು ಹಣ ದೊರೆಯಿತು, ಸದರಿ ಮದ್ಯ ಮತ್ತು ಹಣವನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ಒಂದು ಬಿಳಿ ಚೀಲದಲ್ಲಿ ಹಾಕಿ ಹೊಲೆದು, ಸೀಲ್ ಮಾಡಿ, 6.15 ರಿಂದ 7.15 ರವರೆಗೆ ಪಂಚನಾಮೆಯನ್ನು ಜರುಗಿಸಿ ನಂತರ ಆರೋಪಿ, ವರದಿ, ಪಂಚನಾಮೆ ಮತ್ತು

ಮು.ಮಾಲಿನೊಂದಿಗೆ ಠಾಣಾ ಅಧಿಕಾರಿಯ ಮುಂದೆ ಮುಂದಿನ ಕ್ರಮಕ್ಕಾಗಿ ಹಾಜರುಪಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ